# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 246
2. ಸದಸ್ಯರ ಹೆಸರು : ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 11.07.2018
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಕ್ಕರೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಯಚೂರು ನಗರದಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ನಿರ್ಮಾಣವಾದ ಮನೆಗಳು ಮತ್ತು ನಿವೇಶನಗಳನ್ನು ವಿತರಣೆ ಮಾಡಲು ರೂಪಿಸಿರುವ ಮಾನದಂಡಗಳೇನು; ಅವುಗಳನ್ನು ಯಾವಾಗ ವಿತರಣೆ ಮಾಡಲಾಗುತ್ತದೆ; | ರಾಯಚೂರು ನಗರದಲ್ಲಿ ಕೆಐಎಡಿಬಿ ವತಿಯಿಂದ ನಿರ್ಮಾಣ ಮಾಡಲಾಗುವ ಮನೆಗಳ/ವಸತಿ ನಿವೇಶನಗಳ ವಿತರಣೆ ಕುರಿತು ರೂಪಿಸಲಾದ ಮಾನದಂಡಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br>ಈ ವಸತಿ ಬಡಾವಣೆಯ ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ ಹಾಗೂ ಸಂಬಂಧಿಸಿದ ಇಲಾಖೆಯಿಂದ Environmental Clearance ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಈ ಕಾರ್ಯಗಳು ಮುಗಿದ ನಂತರ ಸ್ಥಳೀಯ ಕೈಗಾರಿಕೆಗಳಿಗೆ ಹಾಗೂ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳಿಗೆ ಹಂಚಿಕೆ ಮಾಡುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. |
| ಆ. | ರಾಯಚೂರು ಜಿಲ್ಲೆಯಲ್ಲಿ ನೂತನವಾಗಿ ಕೈಗಾರಿಕೆ ಪ್ರದೇಶ ನಿರ್ಮಾಣ ಮಾಡುವ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇದೆಯೇ? | ಈ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಸಿಐ 75 ಐಎಪಿ 2018

(ಕೆ.ಜೆ. ಜಾರ್ಜ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಕ್ಕರೆ ಸಚಿವರು

## ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:246 ಕ್ಕೆ ಅನುಬಂಧ-1

**ಮಂಡಳಿ ವತಿಯಿಂದ ಅಭಿವೃದ್ಧಿ ಪಡಿಸಿರುವ ವಸತಿ ಬಡಾವಣೆಗಳಲ್ಲಿ ವಸತಿ ನಿವೇಶನ/ಕಟ್ಟಡಗಳನ್ನು ಹಂಚಿಕೆ ಮಾಡುವ ಕುರಿತು ಅನುಸರಿಸುತ್ತಿರುವ ನಿಯಮಾವಳಿಗಳು:**

1. ವಸತಿ ನಿವೇಶನಗಳು/ಮನೆಗಳ ಹಂಚಿಕೆಗಾಗಿ ಕೆಐಎಡಿಬಿಯ ವೆಬ್‌ಸೈಟ್ ಹಾಗೂ ಪ್ರಮುಖ ಸುದ್ದಿ ದಿನಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸಲಾಗುವುದು.
2. ಅರ್ಜಿಗಳನ್ನು ಸ್ವೀಕರಿಸಲು ಅರ್ಜಿಗಳನ್ನು ಭರ್ತಿಮಾಡಿ ಸಲ್ಲಿಸಲು ಜಾಹಿರಾತು ದಿನಾಂಕದಿಂದ 30 ದಿನಗಳ ಕಾಲಾವಕಾಶ ನೀಡುವುದು.
3. ವಸತಿ ನಿವೇಶನ/ಮನೆಗಳನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಂತೆ ಹಂಚಿಕೆ ಮಾಡುವುದು:

   ಅ. ಅರ್ಜಿದಾರರು ಭಾರತೀಯನಾಗಿರಬೇಕು.

   ಆ. ಅರ್ಜಿದಾರರು ಮಂಡಳಿಯ ವತಿಯಿಂದ ಅಭಿವೃದ್ಧಿ ಪಡಿಸಿದ ಕೈಗಾರಿಕಾ ಪ್ರದೇಶಗಳ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರಬೇಕು.

   ಇ. ಅರ್ಜಿದಾರರು ತಮ್ಮ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಮಾತ್ರ ಅರ್ಜಿ ಸಲ್ಲಿಸುವುದು.

   ಈ. ಅರ್ಜಿದಾರರು ಸದರಿ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುವ ಕೈಗಾರಿಕೆಗಳಲ್ಲಿ ಮಾತ್ರ ಕಾರ್ಯ ನಿರ್ವಹಿಸುವವರು ಅರ್ಜಿ ಸಲ್ಲಿಸುವುದು.

   ಉ. ಅರ್ಜಿದಾರರು, ಕೆಐಎಡಿಬಿ ಯು ಈಗಾಗಲೇ ನಿರ್ಮಿಸಿರುವ ಕೈಗಾರಿಕಾ ಪ್ರದೇಶದಲ್ಲಿ ಸ್ವಂತ ಮನೆ/ವಸತಿ ನಿವೇಶನಗಳನ್ನು ಹೊಂದಿರಬಾರದು.

   ಊ. ಅರ್ಜಿದಾರರು ಜಾಹಿರಾತು ಪ್ರಕಟಣೆಯಾದ ದಿನಾಂಕದಿಂದ 5 ವರ್ಷಗಳ ಅವಧಿಗೆ ಕಡಿಮೆ ಇರದಂತೆ ಕರ್ನಾಟಕ ರಾಜ್ಯದಲ್ಲಿ ವಾಸಮಾಡಿರತಕ್ಕದ್ದು.

   ಋ. ಅರ್ಜಿದಾರರು ಜಾಹಿರಾತು ಪ್ರಕಟಣೆಯಾದ ದಿನಾಂಕಕ್ಕೆ 18 ವರ್ಷಗಳ ವಯೋಮಿತಿ ಮೇಲ್ಪಟ್ಟಿರಬೇಕು.

   ಎ. ಅರ್ಜಿದಾರರು ಸಂಬಂಧಿಸಿದ ಕೈಗಾರಿಕೆಯಲ್ಲಿ ಕನಿಷ್ಠ ಪಕ್ಷ ಎರಡು ವರ್ಷಗಳ ಸೇವೆ ಸಲ್ಲಿಸಿ ದೃಢೀಕರಣ ಪತ್ರವನ್ನು ಘಟಕದ ಮಾಲೀಕರಿಂದ ಪಡೆದು ಸಲ್ಲಿಸುವುದು.

   ಏ. ವಸತಿ ನಿವೇಶನಗಳು ಹಾಗೂ ವಸತಿಗಳನ್ನು 10 ವರ್ಷಗಳ ಗುತ್ತಿಗೆ ಕ್ರಯ ಕರಾರು ಆಧಾರದ ಮೇರೆಗೆ ಹಂಚಿಕೆ ಮಾಡಲಾಗುವುದು.

   ಐ. ಅರ್ಜಿದಾರರು ಅವರ ಹೆಸರಿನಲ್ಲಿ, ಪತ್ನಿಯ ಹೆಸರಲ್ಲಿ, ಅವಲಂಬಿತ ಸದಸ್ಯರ ಹೆಸರಲ್ಲಿ CITB/BDA/KHB/House Building Co-operative Society ಯಾವುದೇ ಇನ್ನಿತರೆ ರಾಜ್ಯದ ಪ್ರಾಧೀಕಾರಗಳಲ್ಲಿ ನಿವೇಶನಗಳನ್ನು ಹಾಗೂ ವಸತಿಗಳನ್ನು ಹೊಂದಿರುವರೊ, ಅವರು ಅರ್ಜಿ ಸಲ್ಲಿಸಲು ಅರ್ಹವಾಗಿರುವುದಿಲ್ಲ.

ಒ. ಮೀಸಲಾತಿ ವರ್ಗ

ಓ. I) ಶೇ.70 ರಷ್ಟು ವಸತಿ/ನಿವೇಶನಗಳನ್ನು ಪ್ರಮುಖ ಕೈಗಾರಿಕೋದ್ಯಮಿಗಳಿಗೆ ಹಾಗೂ ಪ್ರಮುಖ ಕರ್ನಾಟಕದ ಗೃಹ ಮಂಡಳಿ, ಕೆ.ಪಿ.ಟಿ.ಸಿ.ಎಲ್, ಕೆ.ಪಿ.ಸಿ.ಎಲ್, ಹೆಸ್ಕಾಮ್, ಅರೆ ಸರ್ಕಾರಿ ಸಂಸ್ಥೆಗಳಿಗೆ ಮೀಸಲಿಡುವುದು.

II) ಶೇ.25 ರಷ್ಟು ವಸತಿ/ನಿವೇಶನಗಳನ್ನು ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಘಟಕಗಳಲ್ಲಿ ಕೆಲಸ ಮಾಡುವ ನೌಕರರುಗಳಿಗೆ ಮೀಸಲಿಡುವುದು, ಇದರಲ್ಲಿ ಪ.ಜಾ/ಪ.ಪಂಗಡ ಮತ್ತು ಇತರೆ ವರ್ಗಗಳು ಒಳಗೊಂಡಿದೆ.

III) ಶೇ.5 ರಷ್ಟು ವಸತಿ ನಿವೇಶನ/ಮನೆಗಳನ್ನು ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿದ 3 ವರ್ಷಗಳ ನಂತರ ಭವಿಷ್ಯದಲ್ಲಿ ಸಾರ್ವಜನಿಕ ಹರಾಜಿನ ಮುಖಾಂತರ ಹಂಚಿಕೆಗಾಗಿ ಮೀಸಲಿರಿಸುವುದು.

N. Mahesh
Secretary-I
Karnataka Industrial Areas Development Board
Bengaluru - 560 001

Secretary-II
Karnataka Industrial Areas Development Board
Bengaluru - 560 001